ಮಾತು-ಕತೆ

# ನನ್ನೊಂದಿಗೆ ಬೆಳೆಯುತ್ತಿರುವ ವಿಶ್ವವನ್ನು ಹಿಡಿದಿಡುವುದು ಮುಖ್ಯ...

ಕಾಗಿನೆಲೆಯನ್ನು ಹೆಸರಿನೊಂದಿಗೂ ನಾಗಮಂಗಲವನ್ನು ಮನಸ್ಸಿನೊಂದಿಗೆ ಬೆಸೆದುಕೊಂಡಿರುವ **ಡಾ. ಗುರುಪ್ರಸಾದ್ ಕಾಗಿನೆಲೆ** ವೈದ್ಯರಾಗಿ ದುಡಿಯುತ್ತಿರುವುದು ಅಮೆರಿಕದ ರಾಚೆಸ್ಟರ್‌ನಲ್ಲಿ. ಅಲ್ಲಿನ ತುರ್ತು ಚಿಕಿತ್ಸಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅವರು, ಕನ್ನಡದ ಓದುಗರಿಗೆ ಕಥೆಗಾರರಾಗಿ ಕಾದಂಬರಿಕಾರರಾಗಿ ಪರಿಚಿತರು. 'ನಿರ್ಗುಣ', 'ಶಕುಂತಳಾ' ಅವರ ಕಥಾಸಂಕಲನಗಳು. 'ವೈದ್ಯ ಮತ್ತೊಬ್ಬ' ಪ್ರಬಂಧಗಳ ಗುಚ್ಛ. 'ಬಿಳಿಯ ಚಾದರ' ಅವರ ಕಾದಂಬರಿ. 'ಹಿಜಾಬ್' ಪ್ರಸ್ತುತ ಸಹೃದಯರ ನಡುವೆ ಚರ್ಚೆಗೊಳಗಾಗುತ್ತಿರುವ ಹೊಸ ಕಾದಂಬರಿ. ಸೋಮಾಲಿಯಾದ ನಿರಾಶ್ರಿತರನ್ನು ಕೇಂದ್ರವಾಗಿಟ್ಟುಕೊಂಡು ಈ ಹೊತ್ತಿನ ಸಮಾಜವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ 'ಹಿಜಾಬ್'ನಲ್ಲಿದೆ. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ಗುರುಪ್ರಸಾದ್‌ರೊಂದಿಗೆ 'ಮಯೂರ'ಕ್ಕಾಗಿ **ಚ.ಹ. ರಘುನಾಥ** ನಡೆಸಿದ ಸಂದರ್ಶನ ಇಲ್ಲಿದೆ.



**ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.**